

ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ರೊಬಾಟಿಕ್ ಸರ್ಜರಿ ಮಾಡುವ ಯಂತ್ರದೊಂದಿಗೆ ನಿರ್ದೇಶಕ ಡಾ.ಸಿ. ರಾಮಚಂದ್ರ

ಅತ್ಯಾಧುನಿಕ ಸೌಲಭ್ಯಗಳನ್ನು ಬಳಸಿ ಚಿಕಿತ್ಸೆ ನೀಡಿ ಗುಣ ಮಾಡುತ್ತೇವೆ.

- **ಇತ್ತೀಚಿನ ದಿನಗಳಲ್ಲಿ ಯಾವ ಕ್ಯಾನ್ಸರ್ ಜನರನ್ನು ಹೆಚ್ಚಾಗಿ ಕಾಡುತ್ತಿದೆ?**

ಸಾಮಾನ್ಯವಾಗಿ ಬಾಯಿ ಕ್ಯಾನ್ಸರ್; ಶ್ವಾಸಕೋಶ, ಗಂಟಲು, ದೊಡ್ಡ ಕರುಳಿನ ಕ್ಯಾನ್ಸರ್; ಅನ್ನಾಂಗದ ಕ್ಯಾನ್ಸರ್; ತಂಬಾಕು ಉತ್ಪನ್ನ ಸೇವಿಸುವ ಚಟ ಇರುವವರಲ್ಲಿ ಬಾಯಿ, ಹೊಟ್ಟೆ ಕ್ಯಾನ್ಸರ್ ಮಾಮೂಲು. ಮಹಿಳೆಯರಲ್ಲಿ ಗರ್ಭಕೊರಳಿನ ಕ್ಯಾನ್ಸರ್; ಸ್ತನ ಕ್ಯಾನ್ಸರ್ ಹೆಚ್ಚಾಗಿ ಕಾಡುತ್ತದೆ. ಈಗೀಗ ಹದಿಹರೆಯದ ಹುಡುಗಿಯರಲ್ಲೂ ಸ್ತನ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದ್ದು, ರೋಗಿಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಹೆಣ್ಣುಮಕ್ಕಳಲ್ಲಿ ಈ ರೀತಿ ಸಣ್ಣ ವಯಸ್ಸಿಗೇ ಕ್ಯಾನ್ಸರ್ ಕಂಡುಬಂದರೆ ಇದರ ಚಿಕಿತ್ಸೆಗಾಗಿ ರೇಡಿಯೊಥೆರಪಿ, ಕಿಮೋಥೆರಪಿ, ಹಾರ್ಮೋನ್ ಥೆರಪಿ ಮುಂತಾದ ಚಿಕಿತ್ಸೆ ಪಡೆಯುವುದರಿಂದ ಮುಂದೆ ಮಕ್ಕಳಾಗದಿರುವ ಸಮಸ್ಯೆಯೂ ಹೆಚ್ಚಾಗುತ್ತದೆ.

- **'ಶೀಘ್ರ ಪತ್ತೆ; ಕ್ಯಾನ್ಸರ್ ನಾಪತ್ತೆ' ಎಂಬ ಮಾತೊಂದಿದೆ. ಇದನ್ನು ಹೇಗೆ ವಿಶ್ಲೇಷಿಸುತ್ತೀರಿ?**

ಯಾವ ಕಾಯಿಲೆಯಾದರೂ ಅಷ್ಟೆ. ಬೇಗ ಪತ್ತೆ ಆಗಿ ಚಿಕಿತ್ಸೆ ಪಡೆದಷ್ಟು ರೋಗ ವಾಸಿ ಬಹಳ ಬೇಗ ಆಗುತ್ತದೆ. ಕ್ಯಾನ್ಸರ್ ವಿಷಯದಲ್ಲೂ ಅಷ್ಟೆ. ಶೀಘ್ರ ಪತ್ತೆಯಾದರೆ ಶೇಕಡಾ 100ರಷ್ಟು ಗುಣಮುಖರಾಗಿ ಸಹಜ ಜೀವನ ಸಾಧ್ಯ. ಜೊತೆಗೆ ಉತ್ತಮ ಆಹಾರ ಸೇವನೆ, ಕಟ್ಟುನಿಟ್ಟಿನ ವ್ಯಾಯಾಮ, ಹಣ್ಣುಹಂಪಲು ಸೇವನೆ, ವಾಕಿಂಗ್‌ನಂತಹ ದೇಹದಂಡಿಸುವ ಕಾರ್ಯದಲ್ಲಿ ಸಕ್ರಿಯರಾದರೆ ಕ್ಯಾನ್ಸರೂ ಸೇರಿದಂತೆ ಎಲ್ಲ ರೋಗಗಳಿಂದ ಮುಕ್ತರಾಗಬಹುದು. ಈಗೀಗ ಮಕ್ಕಳಲ್ಲೂ ಅತಿತೂಕ, ಬೊಜ್ಜು ಕಾಣಿಸಿಕೊಂಡು ಎಳೆಯರೂ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ.

- **ನಮ್ಮ ರಾಜ್ಯದಲ್ಲಿ ಅಂದಾಜು ಎಷ್ಟು ಮಂದಿ ಕ್ಯಾನ್ಸರ್ ರೋಗಿಗಳಿದ್ದಾರೆ?**

ಕಿದ್ವಾಯಿ ಆಸ್ಪತ್ರೆ ಒಂದರಲ್ಲೇ ವರ್ಷಕ್ಕೆ 20 ಸಾವಿರ ಹೊಸ ಪ್ರಕರಣಗಳು ದಾಖಲಾಗುತ್ತಿವೆ. ನಾಲ್ಕು ಲಕ್ಷದಷ್ಟು ಫಾಲೊಅಪ್ ಪ್ರಕರಣಗಳು ಬರುತ್ತಿವೆ. ರಾಜ್ಯದ ಅಂಕಿಅಂಶ ತೆಗೆದುಕೊಂಡರೆ ಅಂದಾಜು ಒಂದು ಲಕ್ಷದಷ್ಟು ಹೊಸ ಪ್ರಕರಣಗಳು ಹಾಗೂ 15 ಲಕ್ಷ ಫಾಲೊಅಪ್ ಪ್ರಕರಣಗಳು ದಾಖಲಾಗುತ್ತಿವೆ. ■

ಚಿಕಿತ್ಸೆಯನ್ನು ನೆನಪಿಸಿಕೊಳ್ಳುತ್ತಾರೆ.

'ವ್ಯಕ್ತಿಯ ದೇಹದಲ್ಲಿ ಎರಡು ಬಗೆಯ ಸ್ಕಿನ್ ಕ್ಯಾನ್ಸರ್‌ಗಳಿರುತ್ತವೆ. ಒಂದು ಮೆಲನೋಮಾ ಹಾಗೂ ಇನ್ನೊಂದು ನಾನ್ ಮೆಲನೋಮಾ. ಜಗತ್ತಿನಾದ್ಯಂತ ಇರುವ ಚರ್ಮ ಕ್ಯಾನ್ಸರ್‌ನ ಪ್ರಕರಣವನ್ನು ತೆಗೆದುಕೊಂಡರೆ ಬಹುತೇಕ ಪ್ರಕರಣಗಳು ನಾನ್‌ಮೆಲನೋಮಾಗಳದ್ದೇ ಆಗಿರುತ್ತವೆ. ನಾನ್‌ಮೆಲನೋಮ ಚರ್ಮ ಕ್ಯಾನ್ಸರ್ ಪ್ರಕರಣ ಶೇ. 96ರಷ್ಟು ಇದ್ದರೆ ಕೇವಲ ಶೇ.4ರಷ್ಟು ಮಾತ್ರ ಮೆಲನೋಮಾ ಕ್ಯಾನ್ಸರ್ ಆಗಿರುತ್ತದೆ. ಇಂಥ ಸಮಸ್ಯೆ ಅಮೀನಾರದ್ದು ಆಗಿತ್ತು. ಅವರಂತೆಯೇ ಅನೇಕ ಮಹಿಳೆಯರು ತಮ್ಮ ಅರಿವಿಗೆ ಬಾರದೆಯೇ ಸ್ತನಚರ್ಮ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ಆದರೆ ಶಸ್ತ್ರಚಿಕಿತ್ಸೆ ಮೂಲಕ ಇದನ್ನು ಸಂಪೂರ್ಣವಾಗಿ ಗುಣಪಡಿಸಬಹುದು' ಎನ್ನುತ್ತಾರೆ ಡಾ. ಅಂತೋನಿ ಪೈಸ್.

## ಎದೆಗೂಡನ್ನೂ ಬಿಡದು ಈ ಅರ್ಬುದ

ಶ್ವಾಸಕೋಶ ಅಥವಾ ಎದೆಗೂಡಿನ ಕ್ಯಾನ್ಸರ್



ಕ್ಯಾನ್ಸರ್ ಗುಣಪಡಿಸುವಿಕೆಯಲ್ಲಿ ವೈದ್ಯರ ಕಾಳಜಿಯೊಂದಿಗೆ ಆಪ್ತಸಮಾಲೋಚನೆಯೂ ಅಗತ್ಯ